Geetha Shishu Shikshana Sangha (R)
SIMHA SUBBAMAHALAKSHMI FIRST GRADE COLLEGE
KRS ROAD, MYSURU-570 016

ಯಶಸ್ **YASHAS** SSFGC Weekly Newsletter

**Volume – 1** **Issue No.–25** **10th – 16th November 2019**

# A Tribute to the Founder
# B. S. Pandit Memorial Music Concert
# 'SARASWATI'



*Ranga Mantapa*

The music concert, organized in memory of the Founder Secretary, Prof B. S. Pandit, was held at Ranga Mantapa of GSSSIETW, on 16th November 2019 at 6.00 pm.

Padmabhushana awardee, Smt. Sudha Raghunathan's recital of a keerthane in praise of the Goddess Chamundeshwari marked the beginning of the melodious concert which lasted for three hours.



*Artists*

The music maestro was accompanied by Smt.Charumathi Raghuraman in Violin, Sri N C Bharadwaj in mridangam & Sri Raman in Morsing.


*Smt. Anupama B Pandit*

The artists were felicitated by the members of the management along with the welcome address by Smt. Anupama B Pandit, Administrative Officer, GSSS group of institutions. She also spoke about the concert in detail. "This is going to be a regular, annual feature, now onwards", she said (The full text is published in page no 2-3).


*Smt Vanaja B Pandit felicitates Smt Sudha Ragunathan.*

It was a real treat to the music lovers of Mysore to listen to the rendition of a collection of keerthanas in praise of Lord Rama, Krishna and Srihari in various ragas of Carnatic music.

Smt Sudha Ragunathan signed off the concert with the popular numbers like a Tillana, 'Venkatachala Nilaya Vaikunta Puravasa' and 'Vande Maataram'.


*Audiemce*

Many reputed personalities and a large number of music lovers from the city, more than 1500 of them, enjoyed the enthralling evening.

**Report:**
**Smt Poornima K**
**HOD, Department of Commerce**

# ಪ್ರೊ ಬಿ ಎಸ್ ಪಂಡಿತ್

## ಶಿಕ್ಷಣ, ಸಮಾಜ ಸೇವೆ, ಕಲೆ, ಸಂಸ್ಕೃತಿಗಳ ರೂವಾರಿ



(ನವೆಂಬರ್ 16, 2019 ರಂದು ಜಿ.ಎಸ್.ಎಸ್.ಎಸ್ ರಂಗಪಂಟಪದಲ್ಲಿ ನಡೆದ ಶ್ರೀ ಬಿ.ಎಸ್.ಪಂಡಿತ್ ಸ್ಮಾರಕ ಸಂಗೀತ ಕಾರ್ಯಕ್ರಮದಲ್ಲಿ ಸಂಸ್ಥೆಯ ಆಡಾಳಿತಾಧಿಕಾರಿಗಳಾದ ಶ್ರೀಮತಿ ಅನುಪಮ ಬಿ ಪಂಡಿತ್ ರವರು ಮಾಡಿದ ಸ್ವಾಗತ ಭಾಷಣದಿಂದ ಆರಿಸಿಕೊಂಡಿದೆ.)

ಪ್ರೊ ಬಿ ಎಸ್ ಪಂಡಿತ್‌ರವರು ಜೂನ್ ತಿಂಗಳ ಒಂದನೇ ತಾರೀಖು ಸಾವಿರದ ಒಂಬೈನೂರ ಮೂವತ್ತಾರನೇ ಇಸವಿಯಲ್ಲಿ ಶ್ರೀಮತಿ ರುಕ್ಮಿಣಿಬಾಯಿ ಪಂಡಿತ್ ಹಾಗೂ ಶ್ರೀಕಂಠ ಪಂಡಿತ್‌ರವರ ಎಂಟನೇ ಪುತ್ರರಾಗಿ ಜನಿಸಿದರು. ಸಂತ ಫಿಲೋಮಿನ ಕಾಲೇಜಿನಲ್ಲಿ ಪದವಿ ಪಡೆದ ನಂತರ ಗುಜರಾತಿನ ಸರ್ದಾರ್ ವಲ್ಲಭಬಾಯಿ ಪಟೇಲ್ ವಿಶ್ವ ವಿದ್ಯಾನಿಲಯದಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡರು.

ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಾವಿರದ ಒಂಬೈನೂರು ಅರವತ್ತೆರಡರಲ್ಲಿ ಭೌತಶಾಸ್ತ್ರ ವಿಭಾಗದ ಅಧ್ಯಾಪಕರಾಗಿ ಅವರು ತಮ್ಮ ಸೇವೆಯನ್ನು ಆರಂಭಿಸಿದರು. ರೀಡರ್, ಫ್ರೋಫೆಸರ್, ವಿಭಾಗದ ಮುಖ್ಯಸ್ಥರಾಗಿ ನಿರಂತರ ಮೂವತ್ತೆರಡು ವರ್ಷಗಳ ಸೇವೆ ಸಲ್ಲಿಸಿ, ಸಾವಿರಾರು ವಿದ್ಯಾರ್ಥಿಗಳಿಗೆ ಕೇವಲ ಒಬ್ಬ ಸಾಮಾನ್ಯ ಅಧ್ಯಾಪಕರಾಗದೇ, ಮಾರ್ಗದರ್ಶಕರಾಗಿ ಮಾದರಿ ವ್ಯಕ್ತಿಯಾಗಿ, ತಮ್ಮ ಜೀವನ ರೂಪಿಸಿಕೊಳ್ಳಲು ರೂಪದರ್ಶಿಗಳಾದರು.

ಸಾವಿರದ ಒಂಬೈನೂರು ಅರವತ್ತನಾಲ್ಕರಿಂದ ಸಾವಿರದ ಒಂಬೈನೂರ ಎಂಬತ್ತೊಂದರವರೆಗೆ ನಂಬರ್ ಒನ್, ಕರ್ನಾಟಕ ಇಂಜಿನಿಯರ್ ಬೆಟಾಲಿಯನ್‌ನ ಎನ್‌ಸಿಸಿ ಆಫೀಸರ್ ಆಗಿ ಸೇವೆ ಸಲ್ಲಿಸಿ ಮೇಜರ್ ಹುದ್ದೆಯೊಂದಿಗೆ ನಿವೃತ್ತಿ ಹೊಂದಿದರು.

ಒಬ್ಬ ಸಮಾಜ ಸೇವಕರಾಗಿ ಅನೇಕ ಕ್ಷೇತ್ರಗಳಲ್ಲಿ ಅವರ ಯೋಗದಾನ ಸಂದಿದೆ. ಶ್ರೀ ನಾದಬ್ರಹ್ಮ ಸಂಗೀತ ಸಭೆಯ ಗೌರವ ಕಾರ್ಯದರ್ಶಿಗಳಾಗಿ, ಇಪ್ಪತ್ತೈದು ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಗ್ರಾಜ್ಯುಯೇಟ್ಸ್ ಕೋ-ಅಪರೇಟಿವ್ ಬ್ಯಾಂಕಿನ ನಿರ್ದೇಶಕರಾಗಿ ಮೂವತ್ತೊಂದು ವರ್ಷಗಳ ಕಾಲ ಸೇವೆ ಸಲ್ಲಿಸಿ ಅದರ ಗೌರವ ಕೋಶಾಧಿಕಾರಿ ಮತ್ತು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಸಾವರಿದ ಒಂಬೈನೂರ ಎಪತ್ತ ನಾಲ್ಕರಿಂದ ಎರಡು ಸಾವಿರದ ಎಂಟನೇ ಇಸವಿಯವರೆಗೆ ಮಹಾಜನ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಹಾಗೂ ಸಾವಿರದ ಒಂಬೈನೂರ ಎಂಬತ್ತನಾಲ್ಕರಿಂದ ಸಾವಿರದ ಒಂಬೈನೂರ ತೊಂಬತ್ತದರವರೆಗೆ ಶಾರದಾ ವಿಲಾಸ್ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾಗಿ, ಎರಡು ವರ್ಷಗಳ ಕಾಲ ಗೌರವ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಭಾರತೀಯ ವಿದ್ಯಾ ಭವನ, ಮೈಸೂರು ಕೇಂದ್ರದ ಉಪಾಧ್ಯಕ್ಷರಾಗಿ, ಮುಲಕನಾಡು ಸಂಘದ ಸದಸ್ಯರಾಗಿ

ತಮ್ಮ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿಕೊಂಡು ಸೇವೆಯ ಮೂಲಕ ಸಾಮಾಜಿಕ ಜವಬ್ದಾರಿಯನ್ನು ನಿರ್ವಹಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಬಾರಿ ಚುನಾಯಿತರಾಗಿ, ಫೈನಾನ್ಸ್ ಕಮಿಟಿಯ ಸದಸ್ಯರಾಗಿ, ಅಧ್ಯಾಪಕರು ಮತ್ತು ಅಧ್ಯಾಪಕೇತರ ವರ್ಗದವರಿಗೆ ಅಪಾರ ಸೇವೆ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಸುಧಾರಣಾ ಸಮಿತಿಯ ಸದಸ್ಯರಾಗಿ ನೀಡಿದ ಸಲಹೆಗಳು, ಅನುಮೋದನೆಗಳು ಜಾರಿಗೆ ಬಂದಾಗ ಅವರಲ್ಲಿದ್ದ ಮೇಧಾವಿತನ ಹಾಗೂ ಭವಿಷ್ಯದೃಷ್ಟಿ ಎದ್ದು ತೋರುತ್ತಿತ್ತು. ಇಸ್ಕಾನ್ ಅಕ್ಷಯ ಪಾತ್ರೆ ಯೋಜನೆ, ಮುಲಕನಾಡು ಸಂಘದ ಕಟ್ಟಡ ನಿಧಿ, ಕರೀಘಟ್ಟ ಶ್ರೀನಿವಾಸ ದೇವಸ್ಥಾನದ ನವೀಕರಣದ ಸಂಪೂರ್ಣ ವೆಚ್ಚ ಹೀಗೆ ಹಲವಾರು ಸಂಘ ಸಂಸ್ಥೆಗಳಿಗೆ ಧಾರಾಳವಾಗಿ ಅವರು ದಾನ ದತ್ತಿಗಳನ್ನು ನೀಡಿದ್ದಾರೆ.

ವಾಮನನು ತ್ರಿವಿಕ್ರಮನಾಗಿ ಮೂರು ಲೋಕಗಳನ್ನು ತನ್ನ ಪಾದಗಳಲ್ಲಿ ಅಳೆದನೆಂಬುದು ಸರ್ವವಿದಿತ. ಬಿ ಎಸ್ ಪಂಡಿತ್‌ರವರು ಒಬ್ಬ ಸಾಮಾನ್ಯ ಅಧ್ಯಾಪಕರಾಗಿ ವೃತ್ತಿ ಪ್ರಾರಂಭಿಸಿ ಪ್ರವೃತ್ತಿಯಿಂದ ಸಮಾಜಪರ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಬೆಳೆಯುತ್ತಲೇ ಮೌಲ್ಯ ಆಧಾರಿತ ಶಿಕ್ಷಣವನ್ನು ಮಕ್ಕಳಿಗೆ ಕೊಡಲು ಗೀತಾ ಶಿಶು ಶಿಕ್ಷಣ ಸಂಘವೆಂಬ ಸಂಸ್ಥೆಯ ಅಸ್ತಿತ್ವಕ್ಕೆ ಕಾರಣಕರ್ತರಾದರು. ಮಾತೃಶ್ರೀ ರುಕ್ಮಿಣಿಬಾಯಿ ಪಂಡಿತ್‌ರವರ ಪ್ರೇರಣೆಯಿಂದ ಸಾವಿರದ ಒಂಬೈನೂರ ಎಂಬತ್ತೊಂದರಲ್ಲಿ ಈ ಸಂಘವು ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭವಾಗಿ ವರ್ಷ, ವರ್ಷ ಅಭಿವೃದ್ಧಿ ಹೊಂದುತ್ತಾ ತಾಂತ್ರಿಕ ಶಿಕ್ಷಣ, ಮ್ಯಾನೆಜ್‌ಮೆಂಟ್ ನಲ್ಲಿ ಸ್ನಾತಕೋತ್ತರ ಮಟ್ಟದವರೆಗೆ ಬೆಳೆದು ನಿಂತಿತು. ರಾಜ್ಯದ ಪ್ರಪ್ರಥಮ ಮಹಿಳಾ ತಾಂತ್ರಿಕ ಮಹಾವಿದ್ಯಾಲಯವನ್ನು ಅಸ್ತಿತ್ವಕ್ಕೆ ತಂದ ಹೆಗ್ಗಳಿಕೆ ಅವರದಾಯಿತು. ದಾಕ್ಷಿಣ್ಯರಾಹಿತ್ಯ, ಸ್ವಾರ್ಥರಾಹಿತ್ಯ, ಸಂಪೂರ್ಣ ಸಮರ್ಪಣೆ, ಸದಾ ಕಾರ್ಯ ಪ್ರವರ್ತತೆ, ಮತ್ತು ಅವಿರತ ಶ್ರಮ ಇವುಗಳು ಅವರು ಮೈಗೂಡಿಸಿಕೊಂಡಿದ್ದ ಗುಣಗಳು.

ಗೀತಾ ಶಿಶು ಶಿಕ್ಷಣ ಸಂಘದ ಸ್ಫೂರ್ತಿಯ ಸೆಲೆಯಾಗಿ, ಆಧಾರ ಸ್ತಂಭವಾಗಿ, ದಾರಿ ದೀಪವಾಗಿ ಮುನ್ನಡೆಸುತ್ತಾ ಬಂದವರು ಪ್ರೊ ಬಿ ಎಸ್ ಪಂಡಿತ್. ನೇರ ನಡೆ, ಸ್ಪಷ್ಟ ನುಡಿಯ ಅವರ ಹೆಗ್ಗಳಿಕೆಯನ್ನು ಇಂದಿಗೂ ಮರೆಯಲಾಗದು.

ಬಿ ಎಸ್ ಪಂಡಿತ್ ಮೆಮೋರಿಯಲ್ ಕನ್ಸರ್ಟ್– 'ಸರಸ್ವತಿ', ಬಿ ಎಸ್ ಪಂಡಿತ್‌ರವರ ನೆನಪಿಗಾಗಿ, ಮೈಸೂರಿನ ಕಲಾ ಪ್ರೇಮಿಗಳಿಗೆ ಗೀತಾ ಶಿಶು ಶಿಕ್ಷಣ ಸಂಘದ ವತಿಯಿಂದ ಸಮರ್ಪಿಸುತ್ತಿರುವುದು ನಮಗೆ ಒಂದು ಹೆಮ್ಮೆಯ ವಿಷಯವಾಗಿದೆ. ನವೆಂಬರ್ ಮೂರು, ಎರಡು ಸಾವರಿದ ಎಂಟರಂದು ನಮ್ಮನ್ನು ಅಗಲಿ ಹೋದ ಬಿ ಎಸ್ ಪಂಡಿತ್ ರವರ ನೆನಪಿನಲ್ಲಿ ಇನ್ನು ಮುಂದೆ ಪ್ರತಿ ವರ್ಷ ಕಾರ್ತಿಕ ಮಾಸದಲ್ಲಿ ನಾವು ಸಂಗೀತ, ನೃತ್ಯ, ಮುಂತಾದ ಭಾರತೀಯ ಸಾಂಸ್ಕೃತಿಕ ಕಲೆಗಳಿಗೆ ಪ್ರೋತ್ಸಾಹ ನೀಡಿ ಮೈಸೂರಿನ ಕಲಾ ಪ್ರೇಮಿಗಳಿಗೆ ಉನ್ನತ ಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸುವ ಪ್ರಯತ್ನ ಮಾಡುತ್ತೇವೆ ಎಂದು ಹೇಳಲು ಇಚ್ಛಿಸುತ್ತೇನೆ.

## Interaction with Students

On 11th November 2019, Principal, Prof K U Basappa, interacted with First year students. Director, Dr Prabhkara K V was present on the occasion.

## LIC Coaching

On 14th November 2019, Mr Janardhan, Development Officer, LIC, Mr. Venkteshrao H Y, Retired Principal DTI LIC, Bangalore, interacted with the students of second B.Com. 8 students who had enrolled for LIC agency license were informed to attend the offline coaching for the license exam. Other students were persuaded to join the coaching in the following batch. Prabakara K V, Director SSFGC, Poornima K, Subramanya K R and Anil M were present.



***Dr K V Prabhakara interacting with students***

### Placement Officer Mahadev Prasad interacts with the students

On 12th November 2019, Mahadev Prasad, Placement Officer, GSSSIETW, interacted with the students and highlighted the carrer opporutinities awaiting students. He listed basic requirements to become job ready and appricited the initiatives and ideas of SSFGC in preparing the students as employable potential candidates.



This work of art (by Dimple A II B.Com) gives message about water conservation, protection of flora and fauna and in total the protection of planet earth.

## Democracy in India – M.K.Gandhi

***The higher form of freedom carries with it the greatest measure of discipline and humility. Freedom that comes from discipline and humility cannot be denied, unbridled licence is assign of vulgarity injurious alike to self and ones neighbours.***

***Young India, 3-6'26***

**Chief Editor**

**Prof K U Basappa, Principal**

**Executive Editor**

**Shruthi D, HOD, Dept of BCA**

**Photo Corner**

